


ಕಳೆದ ವರ್ಷದ ರಂಜಾನ್ ತಿಂಗಳು. ಜುಲೇಖಾ ಮನೆಯಲ್ಲಿ ಎಲ್ಲರೂ ರೋಜಾ ಇಡುತ್ತಿದ್ದರು. ತಿಂಗಳು ಶುರುವಾಗಿ ಆರೇಳು ದಿನಗಳಾಗಿದ್ದವು. ಸೂರ್ಯೋದಯಕ್ಕೆ ಬಹಳ ಮುಂಚೆಯೇ ಆಹಾರವನ್ನು ಸೇವಿಸಿ ಉಪವಾಸದ ವ್ರತವನ್ನು ಇಡಬೇಕು. ಬೆಳಗಿನ ಜಾವ ನಾಲ್ಕು ಗಂಟೆಗೇ ಎದ್ದು ನಾಲ್ಕು ಜನಕ್ಕಾಗಿ ಅಡುಗೆ ಮಾಡಬೇಕು. ಜುಲೇಖಾ ಎದ್ದಳು. ಮೊದಲು ಒಂದು ಕಪ್ ಕಾಫಿ ಮಾಡಿಕೊಂಡು ಕುಡಿದಾದ ಮೇಲೆ ಅಡುಗೆಯ ಕುರಿತು ಯೋಚನೆ ಮಾಡಿದರಾಯಿತು, ಎಂದು ಪುಟ್ಟ ಪಾತ್ರೆಯಲ್ಲಿ ನೀರನ್ನು ಗ್ಯಾಸ್ ಸ್ಟೌವ್ ಮೇಲೆ ಇಟ್ಟಳು, ಲೈಟರ್ ಅನ್ನು ಚಿಟಿಕ್ ಎನ್ನಿಸಿದಳು. ತಕ್ಷಣ, ಬಾಂಬ್ ಸಿಡಿದ ಹಾಗೆ ಸದ್ದು, ನಾಲ್ಕು ಬೀದಿಗೆ ಕೇಳುವಷ್ಟು. ಅಡುಗೆ ಮನೆಯಲ್ಲಿ ರಾತ್ರಿಯಿಡೀ ಗ್ಯಾಸ್ ಸೋರಿತ್ತು. ನಿದ್ದೆಗಣ್ಣಿನಲ್ಲಿದ್ದ ಜುಲೇಖಾಗೆ ವಾಸನೆ ತಿಳಿಯಲಿಲ್ಲ. ಅನಾಹುತ ಆಗಿತ್ತು. ಮೈತುಂಬ ಸುಟ್ಟ ಗಾಯ; ಆಕೆ ಮರುದಿನ ಆಸ್ಪತ್ರೆಯಲ್ಲಿ ಅಸುನೀಗಿದಳು.

ಸ್ಫೋಟಕ್ಕೆ ಮನೆಯೆಲ್ಲ ಪುಡಿಪುಡಿಯಾಗಿತ್ತು. ಅಳಿದುಳಿದ ವಸ್ತುಗಳನ್ನು ತಂದು ಅಂಗಳದಲ್ಲಿ ಜೋಡಿಸಿದ್ದರು. ಅದರಲ್ಲಿ ಅಪಘಾತಕ್ಕೆ ಕಾರಣವಾಗಿದ್ದ ಗ್ಯಾಸ್ ಸಿಲಿಂಡರ್ ಕೂಡ ಇತ್ತು. ನನ್ನ ಗಮನ ಹೋಗಿದ್ದು ಅದರ ಕತ್ತಿನ ಪಟ್ಟಿಯ ಮೇಲಿದ್ದ ಸಂಖ್ಯೆಯ ಮೇಲೆ. ಸಿ 10 ಎಂದಿತ್ತು. ಆಗ ನನ್ನನ್ನು ಕಾಡಿದ್ದು, ಜುಲೇಖಾ ಮರಣ ಹೊಂದಿದ್ದು, ಗ್ಯಾಸ್ ಕುರಿತಾದ ತನ್ನ ಬೇಜವಾಬ್ದಾರಿಯಿಂದಲೋ ಅಥವಾ ಈ ಸಿಲಿಂಡರ್‌ನ ದೋಷ ಅದಕ್ಕೆ ಕಾರಣವಾಯಿತೋ. ಸಿ 10 ಅದನ್ನು ಸೂಚಿಸುತ್ತಾ ಇತ್ತು.



ಗ್ಯಾಸ್ ಸಿಲಿಂಡರ್‌ಗಳಿಗೂ, ಅವುಗಳ ಬಳಕೆ ಎಲ್ಲಿಯವರೆಗೆ ಸುರಕ್ಷಿತ ಎಂದು ನಿಗದಿಯಾಗಿರುತ್ತದೆ. ಅದರ ನಂತರವೂ ಆ ಸಿಲಿಂಡರ್ ಅನ್ನು ಗ್ಯಾಸ್ ವಿತರಣೆಗೆ ಬಳಸಿದರೆ, ಅದರ ಸುರಕ್ಷತತೆ ಖಾತರಿಯಿಲ್ಲ. ಈ ಅಪಾಯದ ಸೂಚನೆ ಸಿಲಿಂಡರ್‌ನ ಕತ್ತಿನ ಮೇಲೆ ಬರೆದಿತ್ತು. ಆದರೆ ಜುಲೇಖಾ ಮನೆಯವರಾಗಲೀ, ಅವರಿಗೆ ಗ್ಯಾಸ್‌ಅನ್ನು ವಿತರಿಸಿದ ಅಂಗಡಿಯವರಾಗಲೀ ಅದನ್ನು ಗುರುತಿಸದೇ ಹೋದರು.

ಹೌದು. ತಮ್ಮ 'ಎಕ್ಸ್‌ಪೈರಿ ಡೇಟ್' (ಬಳಕೆಯ ಅವಧಿ) ಮುಗಿದಿರುವ ಸಿಲಿಂಡರುಗಳು, ಹಳೆಯವಾಗಿ ಅವುಗಳ ವಾಲ್ವ್ ಪ್ಯಾಡ್ ರಿಂಗ್‌ಗಳು, ಬ್ಲೀಡರ್‌ಗಳು ಮತ್ತು ಸೇಫ್ಟಿವಾಲ್ವ್‌ಗಳು ದುರ್ಬಲವಾಗಿ ಸ್ಟೌವ್ ಆಫ್ ಮಾಡಿ ನಿಲ್ಲಿಸಿದ ನಂತರವೂ ಸಿಲಿಂಡರ್‌ನಿಂದ ಗ್ಯಾಸ್ ಸೋರುವ ಸಾಧ್ಯತೆ ಇರುತ್ತದೆ.

